**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ 144/2019**

ಪಿಡಬ್ಲ್ಯೂ 11
ಸಿಡಬ್ಲ್ಯೂ 8

| | | |
|---|---|---|
| ಹೆಸರು | : | ರಮೇಶ ತಂದೆ ಗುರುನಂಜಪ್ಪ ಹರಕುಣಿ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ನಿಟ್ಟೂರು |

ದಿನಾಂಕ : 04.10.2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ಆರೋಪಿತನ ಪರಿಚಯ ಇರುತ್ತದೆ. ದಿಃ 22.12.2018 ರಂದು ನಾನು ನಿಟ್ಟೂರಿನ ಹೊಂಡದ ಹತ್ತಿರ ಇದ್ದಾಗ ಆರೋಪಿತರು ಅಲ್ಲಿಗೆ ಬಂದು ನನಗೆ ಒಂದು ರೆಡ ಮಿ ಮೊಬೈಲ್ ತೋರಿಸಿ ಇದು ನಮ್ಮ ಮೊಬೈಲ್ ಅದನ್ನು ಮಾರಾಟ ಮಾಡುತ್ತೇವೆ ಅಂದಾಗ ಅದನ್ನು ಅವರ ಕಡೆಯಿಂದ ರೂಪಾಯಿ 4,500/- ಗಳಿಗೆ ತೆಗೆದುಕೊಂಡಿರುತ್ತೇನೆ. ನಂತರ ಅದಕ್ಕೆ ನನ್ನ ಹೆಸರಿನ ಏರಟೆಲ್ ಸಿಮ್ ಹಾಕಿ ಉಪಭೋಗ ಮಾಡುತ್ತಿರುವಾಗ ದಿಃ 27.12.2018 ಬ್ಯಾಡಗಿ ಪೋಲೀಸರು ನನ್ನ ಹತ್ತಿರ ಬಂದು ಇದ್ದು ಕದ್ದ ಮೊಬೈಲ್ ಇದೆ ಅಂತಾ ಹೇಳಿ ನನ್ನನ್ನು ಬ್ಯಾಡಗಿ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಬೆಳಗ್ಗೆ 11.15 ರಿಂದ 11.45 ರವರೆಗೆ ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಂತರ ನನ್ನ ಹತ್ತಿರ ಇದ್ದ ಮೊಬೈಲನ್ನು ತಮ್ಮ ವಶಕ್ಕೆ ಪಡೆದರು. ಆ ಸಮಯದಲ್ಲಿ ಚಾಸಾ-2 ಮತ್ತು 4 ರವರು ಹಾಜರಿದ್ದರು. ನನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-24(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಬೆಳಗ್ಗೆ 11.00 ರಿಂದ 11.45 ರವರೆಗೆ ಮಾಡಿರುತ್ತಾರೆ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-21 ರಲ್ಲಿ ಮೊಬೈಲ್‌ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರಃ ಶ್ರೀ ಡಿ. ಹೆಚ್. ಬಿ. ವಕೀಲರಿಂದ :**

ಈ ಪ್ರಕರಣದ ಬಗ್ಗೆ ನನಗೆ ಸ್ವಂತ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಮೊಬೈಲ್ ಮಾರಾಟ ಮಾಡಿಲ್ಲ ಮತ್ತು ನಾನು ಅವರಿಗೆ ರೂಪಾಯಿ 4,500/- ಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟ ಬಗ್ಗೆ ಸಹಿ ಮಾಡಿರುತ್ತೇನೆ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಊರಿನವರಿದ್ದು ಅವರ ನಮ್ಮ ನಡುವೆ ಜಗಳ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಸಹಿ/-

ಜೆಎಂಎಫ್‌ಸಿ, ಬ್ಯಾಡಗಿ.